**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 6/2020    ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 28

ಸಾಕ್ಷಿದಾರರ ಹೆಸರು    ಅಶೋಕ್ ಶಿಂಧೆ

ತಂದೆಯ ಹೆಸರು    ಚಂದ್ರಪ್ಪ ಶಿಂಧೆ

ವಯಸ್ಸು    42 ವರ್ಷ

ಉದ್ಯೋಗ    ಗುಜುರಿ ವ್ಯಾಪಾರ

ವಿಳಾಸ    ಶಿವಮೊಗ್ಗ

ದಿನಾಂಕಃ 08-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2019 ರ ಸಾಲಿನಲ್ಲಿ ಅಶೋಕ್ ಲೈಲ್ಯಾಂಡ್ ದೋಸ್ತ ಮಿನಿ ಗೂಡ್ಸ ವಾಹನ ಸಂಖ್ಯೆ ಕೆಎ-35-ಬಿ-6763 ನೇದನ್ನು ನಾನು ಸೆಕೆಂಡ್ ಹ್ಯಾಂಡ್ ವಾಹನವಾಗಿ ಖರೀದಿಸಿದ್ದೆ. ಅದರಂತೆ ದಾಖಲೆಯನ್ನು ಬದಲಾಯಿಸಿದ್ದೆ. ಆಗ ನಾನು ಶಿವಮೊಗ್ಗದ ಸಾಗರ ರಸ್ತೆಯ ಗಾಡಿಕೊಪ್ಪ ಎಂಬಲ್ಲಿ ವಾಸವಾಗಿದ್ದೆ. ಆ ವಾಹನದ ಮುಂಬದಿಯ ವಿಂಡ್ ಸ್ಕ್ರೀನ್ ಮೇಲ್‌ಭಾಗದಲ್ಲಿ ''ಶ್ರೀಮಾತಾ'' ಎಂದು ಇಂಗ್ಲೀಷ್ ನಲ್ಲಿ ಬರೆದಿತ್ತು. ನಾನು ಆ ವಾಹನವನ್ನು ಬಾಡಿಗೆಗಾಗಿ ಪಡೆದು ಖರೀದಿಸಿದ್ದೆ. ಆ ವಾಹನವನ್ನು ನನ್ನ ಮನೆಯ ಮುಂಭಾಗದಲ್ಲಿ ರಸ್ತೆಯ ಪಕ್ಕದಲ್ಲಿಯೇ ಇಡುತ್ತಿದ್ದೆ.

2) ದಿನಾಂಕ 03-02-2019 ರಂದು ಆ ವಾಹನವನ್ನು ನನ್ನ ಮನೆಯ ಬಳಿಯಲ್ಲಿಯೇ ರಾತ್ರಿ ನಿಲ್ಲಿಸಿದ್ದೆ. ಮರುದಿನ ಬೆಳಿಗ್ಗೆ ಎದ್ದು ನೋಡಿದಾಗ ವಾಹನ ಇರಲಿಲ್ಲ. ಅದಕ್ಕಾಗಿ ಹುಡುಕಾಡಿದಾಗ ವಾಹನ ಸಿಗಲಿಲ್ಲ. ತಾರೀಕು 05-02-2019 ರಂದು ನಾನು ಶಿವಮೊಗ್ಗದ ವಿನೋಬಾ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ.

3) ದೂರು ಕೊಟ್ಟ ಸುಮಾರು 5-6 ತಿಂಗಳ ನಂತರ ವಿನೋಬಾ ನಗರ ಪೊಲೀಸರು ನನಗೆ ಫೋನ್ ಮಾಡಿ ಕಳೆದಿದ್ದ ನನ್ನ ವಾಹನ ಸಿಕ್ಕಿರುವುದಾಗಿ, ಅದು ಕಾಪು ಠಾಣೆಯಲ್ಲಿ ಇರುವುದಾಗಿ ಹೇಳಿದ್ದರು. ಅದಕ್ಕಾಗಿ ನಾನು ಕಾಪು ಠಾಣೆಗೆ ಬಂದು ಅಲ್ಲಿ ಇದ್ದ ನನ್ನ ವಾಹನವನ್ನು ನೋಡಿ ಗುರುತಿಸಿದ್ದೆ. ಆಗ ಇದ್ದ ಸ್ಟಿಕ್ಕರ್ ಗಳಲ್ಲಿ ''ಎ '' ಅಕ್ಷರಗಳನ್ನು ಎರಡು ಕಡೆಗಳಲ್ಲಿ ಕಿತ್ತಿದ್ದರು. ನನ್ನ ವಾಹನದ ಚೆಸ್ಸಿ ನಂಬ್ರ ಮತ್ತು ಇಂಜಿನ್ ನಂಬ್ರಗಳು ಇರಲಿಲ್ಲ. ಅವುಗಳನ್ನು ಅಳಿಸಿದ್ದರು. ಸದರಿ ಸ್ಟಿಕ್ಕರ್ ಆಧಾರದ ಮೇಲೆ ನಾನು ನನ್ನ ವಾಹನವನ್ನುಗುರುತಿಸಿದ್ದೆ.

4) ನಂತರ ನಮ್ಮ ವಾಹನವನ್ನು ಶಿವಮೊಗ್ಗ ವಿನೋಬಾ ನಗರ ಠಾಣೆಗೆ ವರ್ಗಾಯಿಸಿದ್ದರು. ನಂತರ ಅದನ್ನು ನಾನು ಬಿಡಿಸಿಕೊಂಡಿದ್ದೆ. ಕಾಪು ಠಾಣೆಯಲ್ಲಿ ಸಹ ನನ್ನನ್ನು ವಿಚಾರಿಸಿದ್ದರು. ಆಗ ನಾನು ಹೇಳಿಕೆಯನ್ನು ಸಹ ಕೊಟ್ಟಿದ್ದೆ. ನಂತರ ನನ್ನ ವಾಹನವನ್ನು 1 ಮತ್ತು 2 ನೇ ಆರೋಪಿತರು ಕದಿದ್ದರು ಎಂದು ತಿಳಿದಿತ್ತು. ಅವರು ಕಳ್ಳತನ ಮಾಡಿದ ಜಾಗೆಯನ್ನು ತೋರಿಸಲು ಬಂದಾಗ, ಪೊಲೀಸರು ನನಗೆ ಅವರನ್ನು ತೋರಿಸಿದ್ದರು. ಅವರನ್ನು ನೋಡಿದರೆ ಗುರುತಿಸಬಲ್ಲೆ. 1 ಮತ್ತು 2 ನೇ ಅರೋಪಿತರು ಕದ್ದವಾಹನವನ್ನು 3 ನೇ ಆರೋಪಿಯ ಮೂಲಕ ತಮಿಳುನಾಡಿಗೆ ಮಾರುತ್ತಿದ್ದರು ಎಂದು ತಿಳಿದಿತ್ತು. ನಾನು ವಿನೋಬಾ ನಗರ ಠಾಣೆಯಲ್ಲಿ ಕೊಟ್ಟ ದೂರಿನ ಮೇಲೆ ದಾಖಲಿಸಿದ್ದ ವರ್ತಮಾನದ ಪ್ರತಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-4** ಎಂದು ಗುರುತಿಸಿದ್ದೇನೆ.

**ಪಾಟೀಸವಾಲು: ಶ್ರೀ ಎ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಆರೋಪಿತರ ಪರವಾಗಿ**

1) ನಾನು ದೂರು ಕೊಟ್ಟಾಗ ನನ್ನ ವಾಹನದ ಚೆಸ್ಸಿ ನಂಬ್ರ ಮತ್ತು ಇಂಜಿನ್ ನಂಬ್ರವನ್ನು ದಾಖಲಿಸಿ ಕೊಟ್ಟಿದ್ದೆ. ನನ್ನ ವಾಹನದ ದಾಖಲಾತಿಗಳನ್ನು ಸಹ ನೀಡಿದ್ದೆ. ವಿಮೆ ಕಂಪೆನಿಯವರಿಗೂ ಸಹ ನನ್ನ ಕಳೆದಿದ್ದ ವಾಹನದ ಬಗ್ಗೆ ಮಾಹಿತಿ ನೀಡಿದ್ದೆ. ಅದಕ್ಕಾಗಿ ಪರಿಹಾರ ಸಹ ಬಂದಿತ್ತು. ಒಂದೇ ಬಗೆಯ ಸ್ಟಿಕ್ಕರ್ ಗಳನ್ನು ಬೇರೆ ಬೇರೆ ವಾಹನಗಳಿಗೆ ಹಾಕುತ್ತಾರೆ.

2) ನನ್ನ ಕಳೆದ ವಾಹನ ಕಾಪು ಠಾಣೆಯಲ್ಲಿ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ವಾಹನವನ್ನು ಕಾಪು ಠಾಣೆಯಿಂದಲೇ ಪಡೆದು, ತೆಗೆದುಕೊಂಡು ಹೋಗಿದ್ದೆ. ನಾನು ಅದನ್ನು ಪಡೆಯುವ ಮೊದಲು ಕಾಪು ಠಾಣೆಯಲ್ಲಿ ಅದನ್ನು ತಪಾಸು ಮಾಡಿದ್ದ ಬಗ್ಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಸಹಾಯವಾಗಲೀ ಎಂದು ಈಗ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ